# ನಟಿಸಿದ ಪಾತ್ರಗಳೆಲ್ಲ ಖುಷಿ ಕೊಟ್ಟಿವೆ

'ಒಂದು ಪ್ರೀತಿಯ ಕಥೆ' ಸಿನಿಮಾ ಮೂಲಕ 2007ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ **ಯಜ್ಞಾ ಶೆಟ್ಟಿ**, ಸರಣಿ ಸಿನಿಮಾಗಳ ಸರದಾರಿಣಿಯೇನಲ್ಲ. ಆದರೆ ಅವರ ನಟನಾಪಯಣದ ಒಂದೊಂದು ಹೆಜ್ಜೆಗಳೂ ಭಿನ್ನವಾಗಿವೆ; ಅಷ್ಟೇ ಗಟ್ಟಿಯಾಗಿ ಅಚ್ಚೊತ್ತಿವೆ. ಕಮರ್ಷಿಯಲ್ ಸಿನಿಮಾಗಳ ರೇಸ್‌ನ ಅಖಾಡದಿಂದ ತುಸು ದೂರದಲ್ಲಿ, ಮರದಡಿಯ ತಂಪಿನಲ್ಲಿ ತನ್ನಷ್ಟಕ್ಕೆ ತಾನು ವಾಕ್ ಮಾಡುತ್ತ, ಒಂದೊಂದು ಹೆಜ್ಜೆಯನ್ನೂ ಆಸ್ವಾದಿಸುತ್ತ ನಡೆಯುತ್ತಿರುವಂತೆ ತೋರುವ ಪ್ರಜ್ಞಾಗೆ, ಈ ವಿಹಾರ ಖುಷಿಯನ್ನೂ ತೃಪ್ತಿಯನ್ನೂ ನೀಡಿರುವುದು ಅವರ ಮಾತುಗಳಲ್ಲೇ ವ್ಯಕ್ತವಾಗುತ್ತದೆ.

■ ಪದ್ಮನಾಭ ಭಟ್



◆ **ನಿಮ್ಮ ಸಿನಿಮಾಪಯಣಕ್ಕೆ ಹದಿಮೂರು ವರ್ಷವಾಯ್ತು. ಈ ಪಯಣ ಹೇಗಿತ್ತು?**

ನಾನು ನಟಿ ಆಗಬೇಕು ಎಂದು ಕನಸು ಕಂಡವಳಲ್ಲ. ಅವಕಾಶಕ್ಕಾಗಿ ಅಲೆದಾಡಿ ಇಲ್ಲಿ ನೆಲೆನಿಂತವಳಲ್ಲ. ಅಚಾನಕ್ಕಾಗಿ ಒಂದು ಸಿನಿಮಾದ ಆಡಿಷನ್‌ನಲ್ಲಿ ಭಾಗವಹಿಸಿದೆ. ಆಯ್ಕೆಯಾದೆ. ಓ ನಾನೂ ನಟಿಸಬಹುದಲ್ಲಾ ಅನಿಸಿತು; ಕ್ಯಾಮೆರಾ ಮುಂದೆ ನಾವಲ್ಲದೇ ಇರುವ ಒಂದು ಪಾತ್ರವಾಗಿ ವರ್ತಿಸುವುದು ತುಂಬಾ ಕುತೂಹಲಕಾರಿ ಅನಿಸಿತು. ನಟನೆಯಲ್ಲಿ ಮುಂದುವರಿದೆ.

ನಾನು ನಡೆದು ಬಂದ ದಾರಿ ನೋಡಿದರೆ ಖುಷಿಯಾಗುತ್ತದೆ. ನಾನು ಮಾಡಿರುವುದು ಕೆಲವೇ ಸಿನಿಮಾಗಳು. ಆದರೆ ಆ ಎಲ್ಲ ಪಾತ್ರಗಳೂ ನನಗೆ ಖುಷಿಕೊಟ್ಟಿವೆ. ಬಹುತೇಕ ಅಭಿನಯಪ್ರಧಾನ ಪಾತ್ರಗಳಲ್ಲೇ ಕಾಣಿಸಿಕೊಂಡಿದ್ದೇನೆ. ತೀರಾ ಗ್ಲ್ಯಾಮರಸ್ ಪಾತ್ರಗಳಲ್ಲಿ ನಟಿಸಿಲ್ಲ. ನಟನೆಯ ಪ್ರತಿಭೆಯ ಕಾರಣಕ್ಕಾಗಿಯೇ ನಾನು ಪ್ರಶಂಸೆಯನ್ನು ಪಡೆದವಳು. ಆ ಕಾರಣದಿಂದಲೇ ಗುರ್ತಿಸಿಕೊಂಡವಳು.

◆ **ನಟನೆಯ ಮೊದ ಮೊದಲ ದಿನಗಳಲ್ಲಿ ನೀವು ಸಿನಿಮಾವನ್ನು, ನಟನೆಯನ್ನು ನೋಡುತ್ತಿದ್ದ ರೀತಿಗೂ ಈಗೂ ಏನು ವ್ಯತ್ಯಾಸವಿದೆ?**

ನನಗೆ ಮೊದಲಿನಿಂದಲೂ ಕ್ಯಾಮೆರಾ ಫಿಯರ್ ಇರಲಿಲ್ಲ. ಹತ್ತಲ್ಲ, ನೂರು ಜನ ಎದುರಿಗಿದ್ದಾಗಲೂ ಸುಲಭವಾಗಿ ನಟಿಸುತ್ತಿದ್ದೆ. ಇದೊಂದು ಬಿಟ್ಟರೆ ತಾಂತ್ರಿಕವಾಗಿ ಆ್ಯಂಗಲ್, ಲೈಟ್, ಪ್ರೊಫೈಲ್‌ಗಳ ಬಗ್ಗೆಯೆಲ್ಲ ಏನೂ ಗೊತ್ತಿರ್ಲಿಲ್ಲ. ನಿರ್ದೇಶಕರು ಏನು ಹೇಳುತ್ತಿದ್ದರೋ ಅದನ್ನು ಮಾಡ್ತಿದ್ದೆ ಅಷ್ಟೆ.

ಎರಡನೇ ಸಿನಿಮಾ 'ಎದ್ದೇಳು ಮಂಜುನಾಥ'. ಗುರುಪ್ರಸಾದ್ ಅವರಿಗೆ ಸಹಜ ನಟನೆಯೇ ಬೇಕಾಗಿತ್ತು. ನಾನೂ ಗ್ಲಿಸರಿನ್ ಇಲ್ಲದೇನೆ ಭಾವುಕ ದೃಶ್ಯಗಳಲ್ಲಿ ಅಳುತ್ತಿದ್ದೆ. ಅಲ್ಲಿಂದ ಮುಂದೆ ಒಂದೊಂದು ಪಾತ್ರದ ಮೂಲಕವೂ ನಟನೆಯ ಪಾಠವನ್ನು ಕಲಿಯುತ್ತಲೇ ಹೋದೆ.

ಅಷ್ಟು ದೊಡ್ಡ ತೆರೆಯ ಮೇಲೆ ಒಂದು ಕಲ್ಪಿತ ಪಾತ್ರವನ್ನು ಅಭಿನಯಿಸಲು ಅವಕಾಶ ಸಿಗುವುದು ನಿಜಕ್ಕೂ ಅದೃಷ್ಟದ ವಿಷಯ. ನಟನೆ ಎನ್ನುವುದು ನಿರಂತರ ಪ್ರಕ್ರಿಯೆ. ನಾನು ಇದರಲ್ಲಿ ಫಸ್ಟ್ ರ‍್ಯಾಂಕ್ ಬಂದೆ, ಜಾಸ್ತಿ ಮಾರ್ಕ್ಸ್ ಬಂತು ಅಂತೆಲ್ಲ ಯಾವಾಗಲೂ ಇರುವುದಿಲ್ಲ. ಪ್ರತಿಯೊಂದು ಪಾತ್ರ, ಪ್ರತಿ ಸಿನಿಮಾವೂ ನಮಗೆ ಏನಾದರೂ ಒಂದು ಕಲಿಸುತ್ತಲೇ ಇರುತ್ತದೆ. ಅದಕ್ಕೆ ಕೊನೆ ಎನ್ನುವುದೇ ಇಲ್ಲ. ನನಗೆ ಯಾವತ್ತೂ ಪರಿಪೂರ್ಣ ಅಂತ ಅನಿಸಿಲ್ಲ. ಈಗಲ್ಲ, ಇನ್ನು ನೂರು ಸಿನಿಮಾ ಮಾಡಿ ಮುಗಿಸಿದ ಮೇಲೂ ನಾನು ಎಲ್ಲವನ್ನೂ ಕಲಿತು ಮುಗಿಯಿತು ಎಂದು ಅನಿಸುವುದಿಲ್ಲ. ಕಲಿಯುವುದು ಇದ್ದೇ ಇರುತ್ತದೆ.

◆ **ನೀವು, ಕನ್ನಡ ಕಮರ್ಷಿಯಲ್ ಸಿನಿಮಾಗಳ ರಹದಾರಿಗಿಂತ ಬೇರೆಯಾದ ಸಮಾನಾಂತರ ದಾರಿಯಲ್ಲಿಯೇ ಸಾಗಿದ್ದೀರಿ ಅನಿಸುತ್ತದೆ. ಇದು ನಿಮ್ಮ ಉದ್ದೇಶಪೂರ್ವಕ ಆಯ್ಕೆ ಆಗಿತ್ತೆ?**

'ಎದ್ದೇಳು ಮಂಜುನಾಥ' ಮಾಡುವಾಗ ಇಂಥದ್ದೇ ಸಿನಿಮಾ ಮಾಡಬೇಕು ಎಂದೆಲ್ಲ ಏನೂ ಇರಲಿಲ್ಲ. ಆ ಪಾತ್ರ ಸಿಕ್ಕಿತು, ಒಪ್ಪಿಕೊಂಡೆ ಅಷ್ಟೆ. ಆಗ ನನಗೆ ಸಿನಿಮಾನೂ ಅಷ್ಟೊಂದು ಅರ್ಥ ಆಗುತ್ತಿರಲಿಲ್ಲ. ನಾನು ಹೇಗೆ ನಟಿಸಿದ್ದೇನೆ ಎಂಬುದೂ ಗೊತ್ತಿರ್ಲಿಲ್ಲ. ಆದರೆ ಜನ ಬಂದು ಆ ಸಿನಿಮಾದ ಪಾತ್ರಕ್ಕೆ ತುಂಬ ಪ್ರಶಂಸೆ